ಸಾಕ್ಷಿಯನ್ನು ದಿನಾಂಕ **03.12.2025** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದಃ-**

**1.** ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ, ಅರ್ಥೈಸಿಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನನ್ನ ವಕೀಲರು ಸಿದ್ಧಪಡಿಸಿದ್ದಾರೆ.

**2.** ದಿನಾಂಕ **01.04.1991** ರ ಕ್ರಯಪತ್ರದ ದೃಢೀಕೃತ ನಕಲನ್ನು ನಿ.ಪಿ **1** ಎಂದು, ದಿನಾಂಕ **24.01.1992** ರ ಕ್ರಯಪತ್ರದ ದೃಢೀಕೃತ ನಕಲನ್ನು ನಿ.ಪಿ **2** ಎಂದು, ದಿನಾಂಕ **06.06.1984** ರ ಕ್ರಯಪತ್ರದ ದೃಢೀಕೃತ ನಕಲನ್ನು ನಿ.ಪಿ **3** ಎಂದು, ದಿನಾಂಕ **15.05.1987** ರ ಕ್ರಯಪತ್ರದ ದೃಢೀಕೃತ ನಕಲನ್ನು ನಿ.ಪಿ **4** ಎಂದು, ದಿನಾಂಕ **13.04.2022** ರ ನೋಂದಾಯಿತ ಕ್ರಯಪತ್ರವನ್ನು ನಿ.ಪಿ **5** ಎಂದು, ನಮೂನೆ **3** ಎ ರಿಜಿಸ್ಟರ್ ನ ದೃಢೀಕೃತ ನಕಲನ್ನು ನಿ.ಪಿ **6**, ಮುಟೇಷನ್ ನ ರಿಜಿಸ್ಟರ್ ನ ಪ್ರತಿಯನ್ನು ನಿ.ಪಿ **7**, ಪಹಣಿ ಪತ್ರಿಕೆಯನ್ನು ನಿ.ಪಿ **8** ಎಂದು, ಸರ್ವೆ ಸ್ಕೆಚ್ ಅನ್ನು ನಿ.ಪಿ **9** ಎಂದು, ಆಕಾರ್ ಬಂಧ್ ನ ದೃಢೀಕೃತ ನಕಲನ್ನು ನಿ.ಪಿ **10** ಎಂದು, ಸ್ಕೆಚ್ ನ ದೃಢೀಕೃತ ನಕಲನ್ನು ನಿ.ಪಿ **11** ಎಂದು, ಆಧಾರ್ ಬಂಧ್ ನ ದೃಢೀಕೃತ ನಕಲನ್ನು ನಿ.ಪಿ **12** ಎಂದು, ವಕೀಲರ ನೋಟೀಸಿನ ಕಛೇರಿಯ ಪ್ರತಿಯನ್ನು ನಿ.ಪಿ **13** ಎಂದು, ಅಂಚೆ ರಶೀದಿ ಮತ್ತು ಸ್ವೀಕೃತಿಯನ್ನು ನಿ.ಪಿ **14** ಮತ್ತು **15** ಎಂದು, ಗುರುತಿಸಲಾಯಿತು.

ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.